

ತಂದೆ ಹೆಸರು ಹೇಳಲು ಆಗುವುದಿಲ್ಲ. ಸೇವಂತಿ ಅಕ್ಷರ ಕಲಿಯಲಿಲ್ಲ. ಅವಳ ಅವ್ವ ಜಾಜಕ್ಕ, ಊರಿನ ಶ್ರೀನಿವಾಸ ಗೌಡನಿಗೆ ದಾಸಿಯಾಗಿದ್ದಳು. ಅಂದರೆ ದೇವದಾಸಿ ಪದ್ಧತಿಗೆ ಒಳಗಾಗಿದ್ದಳು. ಕೆಳವರ್ಗದವರು ಮನೆ ಕೆಲಸಗಳಿಗೆ ಗೌಡರ ಮನಿ ಜೀತಕ್ಕೆ ಹೋಗುವುದೇ ಜಾಸ್ತಿ. ಹೀಗಿರುವಾಗ ಸುಮ್ಮನೆ ಅವರೇಳಿದ ಹಾಗೆ ಕೇಳಿಕೊಂಡು ಬಂದ ಜಾಜಕ್ಕ, ತಲೆಬಾಗಿ ಮುತ್ತು ಕಟ್ಟಿಸಿಕೊಂಡು ಹೊರಗಿನ ಪ್ರಪಂಚದ ಜನರಿಗೆ ವೇಶ್ಯೆಯಾಗಿ ಕಂಡಿದ್ದಳು. ಆದರೆ, ಅವಳು ಸೀತೆ-ಸಾವಿತ್ರಿಯಂತೆ ತಾಳಿ ಕಟ್ಟಿಕೊಂಡಿಲ್ಲವಾದರೂ ಗೌಡನೊಬ್ಬನನ್ನು ಬಿಟ್ಟು ಬೇರೆ ಯಾರನ್ನು ಕತ್ತೆತ್ತಿಯೂ ನೋಡಿಲ್ಲದ ಹುಡುಗಿ. ಹೀಗೆ ಒಂದು ದಿನ ಜಾಜಕ್ಕ ನಿಗೂಢವಾಗಿ ಅಮಾವಾಸ್ಯೆ ಹಿಂದಿನ ದಿನ ಕೊಲೆಯಾಗುತ್ತಾಳೆ ಬರ್ಬರವಾಗಿ. ಅವಳ ಸಾವು ಸಹಜ ಸಾವು ಅಲ್ಲ ಎಂದು ಸೇವಂತಿಗೆ ಗೊತ್ತು. ಅವರವ್ವ ಯಾರಿಗೂ ಅನ್ಯಾಯ ಮಾಡಿದವಳಲ್ಲ. ಏನು ಮಾಡುವುದು, ಸೇವಂತಿಯ ಅವ್ವನ ಬಾಳು ಈ ಮಟ್ಟಕ್ಕೆ ಅಂತ್ಯವಾಗುತ್ತದೆಯೆಂದು ಎಂದೂ ಯಾರು ಎಣಿಸಿರಲಿಲ್ಲ. ಇದಕ್ಕೆ ಕಾರಣ ನಿಧಿ, ಊರಲ್ಲೇ ಹಬ್ಬಿದ್ದ ನಿಧಿಯ ಸುದ್ದಿಗೆ, ನಿಧಿಯ ದಾಹಕ್ಕೆ ಜಾಜಕ್ಕ ಬಲಿಯಾಗಿದ್ದಳು.

ಅವ್ವನೇ ಎಲ್ಲಾ ಎಂದು ಬದುಕಿದ ಸೇವಂತಿ, ಯಾರ ಆಶ್ರಯ ಹುಡುಕಲಿ ದೇವರೇ ಎಂದು ಸುಮ್ಮನೆ ಎರಡ್ಮೂರು ದಿನ ಅಳುತ್ತಾ ಮನೆಯಲ್ಲಿ